**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಕೆ.ಎ. ತಿಪ್ಪೇಸ್ವಾಮಿ ರವರು, ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯದ ಕುರಿತು.**

**ಪ್ರಶ್ನೆ:** ರಾಷ್ಟ್ರದಲ್ಲಿ ದ್ರಾಕ್ಷಿ ಬೆಳೆಯುವದರಲ್ಲಿ ಮಹರಾಷ್ಟ್ರ ರಾಜ್ಯದ ನಂತರ ಕರ್ನಾಟಕ ರಾಜ್ಯ 2ನೇ ಸ್ಥಾನದಲ್ಲಿ ಇದೆ, ರಾಜ್ಯದ ವಿಜಯಪುರ, ಬಾಗಲಕೋಟೆ, ಬೆಳಗಾವಿ ಮತ್ತು ಬೆಂಗಳೂರು ಗ್ರಾಮಾಂತರ ಮತ್ತು ನಗರ ಜಿಲ್ಲೆಗಳ ಕೇಲವು ತಾಲ್ಲೂಕುಗಳಲ್ಲಿ ಬೆಳೆ ಬೆಳೆಯಲಾಗುತ್ತಿದೆ. ರಾಜ್ಯದಲ್ಲಿ ಒಟ್ಟಾರೆ, 29,197 ಹೆಕ್ಟರ್ ಪ್ರದೇಶದಲ್ಲಿ ದ್ರಾಕ್ಷಿ ಬೆಳೆಯಲಾಗುತ್ತಿದ್ದು, ಪ್ರಸ್ತುತದಲ್ಲಿ ದ್ರಾಕ್ಷಿ ಉತ್ಪಾದನೆ 98 ಲಕ್ಷ ಟನ್‌ನಷ್ಟು ಇರುತ್ತದೆ. ರಾಜ್ಯದ ಈ ಒಟ್ಟಾರೆ ಉತ್ಪಾದನೆ ಶೇಕಡಾ 75% ಉತ್ಪಾದನೆ ವಿಜಯಪುರದ ಜಿಲ್ಲೆಯಲ್ಲಿ ಉತ್ಪಾದನೆಯಾಗುತ್ತಿದೆ. ಮುಂದುವರೆದು, 4ಕೆಜಿ ತಾಜಾ ದ್ರಾಕ್ಷಿಯನ್ನು 3 ವಾರಗಳ ಕಾಲ ಒಣಗಿಸಿದರೆ 1 ಕೆಜಿ ಎಷ್ಟು ಒಣ ದ್ರಾಕ್ಷಿ ಬರುತ್ತದೆ. ಅದರೆ, ರಾಜ್ಯದಲ್ಲಿ ದ್ರಾಕ್ಷಿ ಬೆಳೆಗಾರರು ತುಂಬಾ ಅಂತಕ ಪರಿಸ್ಥಿಯಲ್ಲಿ ಇದ್ದಾರೆ. ಹೆಚ್ಚಾದ ದ್ರಾಕ್ಷಿ ಉತ್ಪಾದನೆ ಒಣ ದ್ರಾಕ್ಷಿ ಶೇಖರಣೆಗೆ ಲಭ್ಯವಿಲ್ಲದ ಶ್ಶೈತ್ಯಗಾರ ವ್ಯವಸ್ಥೆ ಅಂದರೆ Cold Storage facility ಮಾರುಕಟ್ಟೆಯಲ್ಲಿ ದ್ರಾಕ್ಷಿ ಬೆಳೆ ಕುಸಿದಿದೆ, ಪ್ರಸ್ತುತದಲ್ಲಿ 1 ಕೆಜಿ ಒಣ ದ್ರಾಕ್ಷಿ ಬೆಲೆ 250-270 ರೂ ನಿಂದ 110-150 ರೂವರೆಗೆ ಇಳಿದಿದೆ, ರಾಜ್ಯದಲ್ಲಿ ಒಣ ದ್ರಾಕ್ಷಿ ಶೇಖರಣೆಗೆ ಅಗತ್ಯವಿರುವ - Cold Storage facility ವ್ಯವಸ್ಥೆಇಲ್ಲದೆ, ದ್ರಾಕ್ಷಿ ಬೆಳೆಗಾರರು ಪೇಚಾಡುತ್ತಿದ್ದಾರೆ. ರಾಜ್ಯದಲ್ಲಿ ಪ್ರಸ್ತುತದಲ್ಲಿ ಒಟ್ಟಾರೆ ಒಣ ದ್ರಾಕ್ಷಿ ಉತ್ಪನ್ನದ ಶೇ 30 ರಷ್ಟು ಮಾತ್ರ ಶೇಖರಣೆ ವ್ಯವಸ್ಥೆ ಇದ್ದು, ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆ ರೈತರು ಶ್ಶೈತ್ಯಗಾರ ಇಲ್ಲದೆ, ಪಕ್ಕದ ನೆರೆ ರಾಜ್ಯವಾದ ಮಹಾರಾಷ್ಟ್ರದಲ್ಲಿರುವ ಶ್ಶೈತ್ಯಗಾರದಲ್ಲಿ ಒಣ ದ್ರಾಕ್ಷಿಯನ್ನು ಶೇಖರಿಸುತ್ತಿದ್ದಾರೆ. ಈ ಮದ್ಯೆ ಕರ್ನಾಟಕ ದ್ರಾಕ್ಷಿರಸ ಮಂಡಳಿಯು ಸಹ ದ್ರಾಕ್ಷಿ ಬೆಳೆಗಾರರ ನೆರವಿಗೆ ಯಾವುದೇ ಸಹಾಯಕ ಯೋಜನೆ ಮತ್ತು ಕಾರ್ಯಕ್ರಮಗಳನ್ನು ರೂಪಿಸಿರುವುದಿಲ್ಲ. ಆದ್ದರಿಂದ, ರಾಜ್ಯ ಸರ್ಕಾರ ಈ ಬಗ್ಗೆ ಎಚ್ಚರವಹಿಸಿ, ದ್ರಾಕ್ಷಿ ಬೆಳೆಗಾರರಿಗೆ ಅಗತ್ಯವಿರುವ ಶ್ಶೈತ್ಯಗಾರ ವ್ಯವಸ್ಥೆ ಮತ್ತು ಇತರೆ ನೆರವುಗಳನ್ನು ನೀಡಲು ಮುಂದಾಗಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

**ಉತ್ತರ:**

ದ್ರಾಕ್ಷಿ ಬೆಳೆಯನ್ನು ರಾಜ್ಯದಲ್ಲಿ 32,473 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದು, ಉತ್ಪಾದನೆಯು 8.21 ಲಕ್ಷ ಮೆಟ್ರಿಕ್ ಟನ್ ಇರುತ್ತದೆ. ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳು ಇದರಲ್ಲಿ ಸಿಂಹಪಾಲನ್ನು ಹೊಂದಿದ್ದು, ಒಟ್ಟು 25,637 (ಶೇ. 78) ಹೆಕ್ಟೇರ್ ಪ್ರದೇಶವನ್ನು ಹೊಂದಿವೆ. ಈ ಜಿಲ್ಲೆಗಳಲ್ಲಿ ಬೆಳೆಯಲಾಗುವ ದ್ರಾಕ್ಷಿ ಬೆಳೆಯ ಶೇ.90 ರ ಉತ್ಪನ್ನವನ್ನು ಒಣ ದ್ರಾಕ್ಷಿಯನ್ನಾಗಿ ಮಾರ್ಪಾಡು ಮಾಡಲಾಗುತ್ತದೆ. ಸದರಿ ಜಿಲ್ಲೆಗಳಲ್ಲಿನ ಒಟ್ಟು ವಾರ್ಷಿಕ ಒಣ ದ್ರಾಕ್ಷಿ ಉತ್ಪಾದನೆ 1.25 ಲಕ್ಷ ಮೆಟ್ರಿಕ್ ಟನ್ ಇರುತ್ತದೆ.

ಒಣ ದ್ರಾಕ್ಷಿಯ ಗುಣಮಟ್ಟವನ್ನು ನಿರ್ವಹಿಸಲು ಮತ್ತು ಉತ್ತಮ ಮಾರುಕಟ್ಟೆ ಬೆಲೆ ಪಡೆಯಲು ಶೀತಲ ಗೃಹಗಳಲ್ಲಿ ಸಂಗ್ರಹಿಸಿಡುವ ಅವಶ್ಯಕತೆ ಇದೆ. ರೈತರ ಅನುಕೂಲಕ್ಕಾಗಿ ಸಾರ್ವಜನಿಕ ಹಾಗೂ ಖಾಸಗಿ ಒಡೆತನದ ಶೀತಲ ಗೃಹಗಳಿದ್ದು, ವಿವರ ಕೆಳಗಿನಂತಿದೆ.

| ಸಂ | ಜಿಲ್ಲೆಯ ಹೆಸರು | ಶೀತಲ ಗೃಹಗಳ ಸಂಖ್ಯೆ | ಸಾಮರ್ಥ್ಯ (ಮೆಟ್ರಿಕ್ ಟನ್) |
|---|---|---|---|
| 1 | ವಿಜಯಪುರ | 29 | 39055 |
| 2 | ಬಾಗಲಕೋಟೆ | 05 | 5865 |
| 3 | ಬೆಳಗಾವಿ | 04 | 8500 |
| | **ಒಟ್ಟು** | **38** | **53420** |

ಈ ಶೀತಲ ಗೃಹಗಳಲ್ಲಿ ಒಣ ದ್ರಾಕ್ಷಿಯನ್ನು ಸಂಗ್ರಹಿಸಿಟ್ಟುಕೊಂಡು, ಮಾರುಕಟ್ಟೆಯಲ್ಲಿ ದರದ ಪರಿಸ್ಥಿತಿ ಉತ್ತಮವಿರುವಾಗ ಬೆಳೆಗಾರರು ಮಾರಾಟ ಮಾಡಲು ಸಹಕಾರಿಯಾಗಿದೆ. ಕರ್ನಾಟಕದಲ್ಲಿ ಉತ್ಪಾದಿಸಲಾಗುವ ಒಣದ್ರಾಕ್ಷಿಗೆ ಪ್ರಮುಖ ಮಾರುಕಟ್ಟೆಗಳೆಂದರೆ ಕರ್ನಾಟಕದ ವಿಜಯಪುರ ಹಾಗೂ ಮಹಾರಾಷ್ಟ್ರದ ತಸಗಾಂವ್, ಸಾಂಗ್ಲಿ. ಪ್ರಸ್ತುತ ವರ್ಷದಲ್ಲಿ ಒಣದ್ರಾಕ್ಷಿ ಮಾರುಕಟ್ಟೆ ದರವು ಕಡಿಮೆ ಇರುವುದನ್ನು ಗಮನಿಸಲಾಗಿದೆ. ಹೆಚ್ಚಿನ ಪ್ರದೇಶದಲ್ಲಿ ದ್ರಾಕ್ಷಿ ಬೆಳೆ ಬೇಸಾಯ ಮಾಡಿದ್ದು, ಹೆಚ್ಚಿನ ಉತ್ಪಾದನೆಯಾಗಿರುವುದು ಬೆಲೆ ಕಡಿಮೆಯಾಗಲು ಕಾರಣವಾಗಿದೆ.

ಒಣ ದ್ರಾಕ್ಷಿಗೆ ಕನಿಷ್ಠ ಬೆಂಬಲ ಬೆಲೆ ಘೋಷಿಸಲು ಕೇಂದ್ರ ಸರ್ಕಾರಕ್ಕೆ ಕರ್ನಾಟಕ ಸರ್ಕಾರದ ಪತ್ರ ಸಂಖ್ಯೆ. HORTI/112/HCM/2023 ದಿನಾಂಕ: 01-12-2023 ರಂದು ಪ್ರಸ್ತಾವನೆ ಸಲ್ಲಿಸಲಾಗಿದೆ.

ಕರ್ನಾಟಕ ದ್ರಾಕ್ಷಿ ಮತ್ತು ವೈನ್ ಬೋರ್ಡ್ ವತಿಯಿಂದ NABARD ಪ್ರಾಯೋಜಿತ RIDF Tranche-28 ರಡಿಯಲ್ಲಿ 10000 MT ಸಾಮರ್ಥ್ಯದ ಶೀತಲ ಗೃಹ ಹಾಗೂ ಒಣದ್ರಾಕ್ಷಿ ಸಂಸ್ಕರಣ ಘಟಕವನ್ನು ವಿಜಯಪುರ ಜಿಲ್ಲೆಯ, ತಿಕೋಟ ||ತಾ||, ತೊರವಿ ಗ್ರಾಮದ ವೈನ್ ಪಾರ್ಕ್ ಜಾಗದಲ್ಲಿ ಸ್ಥಾಪಿಸಲು ಟೆಂಡರ್ ಕರೆಯಲಾಗಿದೆ.

RIDF Tranche 29 ಯೋಜನೆಯಡಿ ವಿಜಯಪುರ ಜಿಲ್ಲೆಯ ಅರಿಕೆರಿ ಗ್ರಾಮದಲ್ಲಿ ಒಟ್ಟು 2000 ಮೆ.ಟನ್ ಸಾಮಾರ್ಥ್ಯದ ಶೈತ್ಯಾಗಾರ ಸ್ಥಾಪನೆಗಾಗಿ ಒಟ್ಟು 1011.77 ಲಕ್ಷಗಳ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, 2024-25ನೇ ಸಾಲಿನಲ್ಲಿ ಅನುಷ್ಠಾನಗೊಳ್ಳಲಿದೆ.

## ತೋಟಗಾರಿಕೆ ಇಲಾಖೆಯಿಂದ ದ್ರಾಕ್ಷಿ ಬೆಳೆಗೆ ನೀಡುತ್ತಿರುವ ಪ್ರೋತ್ಸಾಹಗಳು

- **ರಾಷ್ಟ್ರೀಯ ತೋಟಗಾರಿಕೆ ಮಿಷನ್**

1. ಹೊಸ ತೋಟ ನಿರ್ಮಾಣ - ರೂ. 30 ಸಾವಿರ ಪ್ರತಿ ಹೆಕ್ಟೇರ್ ಗೆ ಸಹಾಯಧನ
2. ಸಮಗ್ರ ಪ್ಯಾಕ್ ಹೌಸ್ - ರೂ. 17.50 ಲಕ್ಷ (ಗರಿಷ್ಟ) ಶೇ.35 ರಂತೆ ಸಹಾಯಧನ
3. Refer Van - ರೂ. 9.00 ಲಕ್ಷ (ಗರಿಷ್ಟ) ಸಹಾಯಧನ ಶೇ. 40 ರಂತೆ ಸಹಾಯಧನ
4. ಪ್ರಾಥಮಿಕ ಸಂಸ್ಕರಣ ಘಟಕ (ಒಣ ದ್ರಾಕ್ಷಿ ಘಟಕ) - ರೂ. 10.00 ಲಕ್ಷ (ಗರಿಷ್ಟ) ಸಹಾಯಧನ ಶೇ. 40 ರಂತೆ ಸಹಾಯಧನ

5. ಶೀತಲ ಗೃಹ - ಏಕ ರೂಪ ತಾಪಮಾನ ರೂ. 140.00 ಲಕ್ಷ (ಗರಿಷ್ಟ) ಶೇ.35 ರಂತೆ ಸಹಾಯಧನ (5000 ಮೇ.ಟ. ವರಗೆ) ಬಹು ರೂಪ ತಾಪಮಾನ ರೂ.170.00 ಲಕ್ಷ (ಗರಿಷ್ಟ) ಶೇ.35 ರಂತೆ ಸಹಾಯಧನ (5000 ಮೇ.ಟ. ವರಗೆ)

- **ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY)**

1. ನೀರಿನಲ್ಲಿ ಕರಗುವ ಗೊಬ್ಬರ - ರೂ. 6250 (ಗರಿಷ್ಟ) ಪ್ರತಿ ಹೆಕ್ಟೇರ್ ಗೆ ಸಹಾಯಧನ
2. Creates / Boxes - ರೂ. 7500 (ಗರಿಷ್ಟ) ಪ್ರತಿ ಹೆಕ್ಟೇರ್ ಗೆ ಸಹಾಯಧನ
3. ಕೃಷಿ ಹೊಂಡ - 4500 CMT – ರೂ. 2.80 ಲಕ್ಷಗಳು
   6500 CMT – ರೂ. 4.00 ಲಕ್ಷಗಳು
   9000 CMT - ರೂ. 5.00 ಲಕ್ಷಗಳು

- **ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ**

1. ಹೊಸ ತೋಟ ನಿರ್ಮಾಣ - ರೂ. 31718/- ರಿಂದ ರೂ. 182319/- (ಬೆಳೆ ಅಂತರಕ್ಕೆಅನುಗುಣವಾಗಿ)

- **ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ**

1. ಹೊಸ ತೋಟ ನಿರ್ಮಾಣ ಮತ್ತು ನಿರ್ವಹಣೆ ವೆಚ್ಚ - ರೂ. 42800/- ರಿಂದ ರೂ. 46400/- (ಬೆಳೆ ಅಂತರಕ್ಕೆ ಅನುಗುಣವಾಗಿ)

ಕರ್ನಾಟಕ ದ್ರಾಕ್ಷಿ ಸಂಸ್ಕರಣೆ ಮತ್ತು ವೈನ್ ನೀತಿ – 2007" ಅನ್ನು ಜಾರಿಗೆ ತಂದು ಇದರಲ್ಲಿನ ಕಾರ್ಯಕ್ರಮಗಳ ಅನುಷ್ಠಾನ ಹಾಗೂ ಮೇಲ್ವಿಚಾರಣೆಗಾಗಿ 2007 ರಲ್ಲಿ ಕರ್ನಾಟಕ ದ್ರಾಕ್ಷಾರಸ ಮಂಡಳಿನ್ನು ಸ್ಥಾಪಿಸಲಾಗಿದೆ.

- ದೇಶದಲ್ಲಿ ಪ್ರಪ್ರಥಮ ಬಾರಿಗೆ ವೈನ್ ಮಾತ್ರ ಮಾರಲು ಹಾಗೂ ಸೇವಿಸಲು ವಿಶಿಷ್ಟವಾದ ವೈನ್ ಬೋಟಿಕ್ ಮತ್ತು ವೈನ್ ಟಾವರಿನ್ ಸನ್ನದುಗಳನ್ನು ಪರಿಚಯಿಸಲಾಗಿ ಪ್ರಸ್ತುತ 89 ವೈನ್ ಬೋಟಿಕ್ ಗಳು ಮತ್ತು 232 ವೈನ್ ಟಾವರಿನ್ ಗಳು ಕಾರ್ಯ ನಿರ್ವಹಿಸುತ್ತಿದ್ದು, ವೈನ್ ಬೋಟಿಕ್ ಸನ್ನದಿಗೆ ರೂ. 5000/- ಹಾಗೂ ವೈನ್ ಟಾವರಿನ್ ಗೆ ರೂ. 1000/- ಗಳು ವಾರ್ಷಿಕ ಶುಲ್ಕವಿರುತ್ತದೆ.
- ಕರ್ನಾಟಕ ವೈನ್ ಬೋರ್ಡ್ ವತಿಯಿಂದ ರಾಜ್ಯದ ಪ್ರಮುಖ ನಗರಗಳಾದ ಬೆಂಗಳೂರು, ಕಾರವಾರ, ಮಂಗಳೂರು, ಉಡುಪಿ, ಬೆಳಗಾವಿ, ಮೈಸೂರು, ಹುಬ್ಬಳ್ಳಿ, ಧಾರವಾಡ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದ ವೈನ್ ಉತ್ಸವಗಳನ್ನು ಯಶಸ್ವಿಯಾಗಿ ಆಯೋಜಿಸಿದ ಹಿನ್ನಲೆಯಲ್ಲಿ ಪ್ರಸ್ತುತ ರಾಜ್ಯದಲ್ಲಿ 93.3 ಲಕ್ಷ ಲೀಟರ್ ವೈನ್ ಮಾರಾಟವಾಗಿರುತ್ತದೆ ಹಾಗೂ ಒಟ್ಟು ವಹಿವಾಟು ರೂ. 462.00 ಕೋಟಿಗಳಾಗಿರುತ್ತದೆ.

- ಕರ್ನಾಟಕ ವೈನ್ ಬೋರ್ಡ್ ದೇಶದ ಪ್ರಮುಖ ನಗರಗಳಾದ, ದೆಹಲಿ, ಕೋಲ್ಕತ್ತಾ, ಮುಂಬೈ ಮತ್ತು ಬೆಂಗಳೂರು ನಗರಗಳಲ್ಲಿ ನಡೆದ ಪ್ರವಾಸೋದ್ಯಮ ಹಾಗೂ ಇತರೇ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ರಾಜ್ಯದ ವೈನ್ ಗಳನ್ನು ಪ್ರಚಾರಗೊಳಿಸಲಾಗಿದೆ.
- ಕರ್ನಾಟಕ ವೈನ್ ಬೋರ್ಡ್ ಇತರೇ ಸರ್ಕಾರಿ ಸಂಸ್ಥೆಗಳಾದ, National Research Centre for Grapes, Pune, Ministry of Food Processing Industries, Delhi, National Horticulture Board, ಮತ್ತು ತೋಟಗಾರಿಕೆ ವಿಶ್ವ ವಿದ್ಯಾನಿಲಯ, ಬಾಗಲ ಕೋಟೆ ಸಹಯೋಗದೊಂದಿಗೆ ರಾಷ್ಟ್ರ ಮಟ್ಟದ ದ್ರಾಕ್ಷಿ ಬೆಳೆ ಹಾಗೂ ವೈನ್ ಉತ್ಪಾದನೆ ಬಗ್ಗೆ ವಿಚಾರ ಸಂಕಿರಣಗಳನ್ನು ಯಶಸ್ವಿಯಾಗಿ ಹಮ್ಮಿಕೊಳ್ಳಲಾಗಿದೆ.
- ಕರ್ನಾಟಕ ರಾಜ್ಯದಲ್ಲಿ ಪ್ರಮುಖ 19 ವೈನರಿಗಳು ಕಾರ್ಯ ನಿರ್ವಹಿಸುತ್ತಿದ್ದು, ಇದರಲ್ಲಿ Grover Zampa Vineyards, Doddaballapur & KRSMA Estates, Koppal ಈ ವೈನರಿಗಳು ಉತ್ಕೃಷ್ಟ ವೈನ್ ತಯಾರಿಸುತ್ತಿದ್ದು, 30 ದೇಶಗಳಿಗೆ ರಫ್ತು ಮಾಡುತ್ತಿರುತ್ತಾರೆ.
- ಕರ್ನಾಟಕ ವೈನ್ ಬೋರ್ಡ್ ದೇಶದಲ್ಲಿ ಪ್ರಪ್ರಥಮ ಬಾರಿಗೆ ವೀಟ್(WEAT- wine education appreciation and tasting) ಎಂಬ Certified workshop ಅನ್ನು ಕೃಷಿ, ತೋಟಗಾರಿಕೆ ಮತ್ತು ಹೋಟೆಲ್ ಮ್ಯಾನೇಜ್ ಮೆಂಟ್ ವಿದ್ಯಾರ್ಥಿಗಳಿಗೆ ಯಶಸ್ವಿಯಾಗಿ ಹಮ್ಮಿಕೊಂಡಿದ್ದು, ಸದರಿ (workshop ಅನ್ನು ರಾಜ್ಯ ಮತ್ತು ಅಂತರ ರಾಜ್ಯದಲ್ಲಿಯೂ ಸಹ ಹಮ್ಮಿಕೊಳ್ಳಲಾಗಿದೆ.

ರಾಜ್ಯದಲ್ಲಿ ಉತ್ಕೃಷ್ಟ ವೈನ್ ದ್ರಾಕ್ಷಿ ಬೆಳೆಯುವ ನಾಲ್ಕು ವಲಯಗಳನ್ನು ಗುರುತಿಸಿದ್ದು. ಪ್ರಮುಖವಾಗಿ ಕೃಷ್ಣಾ,ಕಾವೇರಿ, ನಂದಿ ಕಣಿವೆ ಹಾಗೂ ಹಂಪಿ ಹಿಲ್ಸ್ ಎಂಬ ನಾಲ್ಕು ವಲಯಗಳಲ್ಲಿ ವೈನ್ ದ್ರಾಕ್ಷಿ ತಳಿಗಳನ್ನು ಬೆಳೆಯಲು ಅತ್ಯಂತ ಸೂಕ್ತವಾಗ ಪ್ರದೇಶಗಳೆಂದು ಗುರುತಿಸಿ ಈ ನಾಲ್ಕು ಕಣಿವೆ ಪ್ರದೇಶಗಳಲ್ಲಿ ಪ್ರಸ್ತುತ 2000 ಎಕರೆ ವಿಸ್ತೀರ್ಣದಲ್ಲಿ ವೈನ್ ತಳಿಗಳನ್ನು ಬೆಳೆಯುತ್ತಿದ್ದು, 2007-08 ರಲ್ಲಿ 13 ಲಕ್ಷ ಲೀಟರ್‌ನಿಂದ ಪ್ರಸ್ತುತ 93.3 ಲಕ್ಷ ಲೀಟರ್ ವೈನ್ ಉತ್ಪಾದನೆ ಮಾಡಲಾಗುತ್ತಿದೆ.

**NO:HORTI 19 HEG 2024**

**(ಎಸ್.ಎಸ್.ಮಲ್ಲಿಕಾರ್ಜುನ್)**
ಗಣಿ ಮತ್ತು ಭೂ ವಿಜ್ಞಾನ ತೋಟಗಾರಿಕೆ ಸಚಿವರು